## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 264/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಅಭಿ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹೇಶ್ | | **30.12.2024** |
| **ವಯಸ್ಸು** | ಃ **23** ವರ್ಷ | | |
| **ವೃತ್ತಿ** | ಃ ಫೋಟೋಗ್ರಾಫರ್ | **ಪ್ರಾ.ಸಾ.** ಃ | **09** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ | **12** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನಗೆ ಸೇರಿದ ಈಶ್ವರ್ ಸ್ಟುಡಿಯೋ ಮೈಸೂರಿನ ಸಬ್ ಅರ್ಬನ್ ಬಸ್ ಸ್ಟ್ಯಾಂಡ್ ಬಳಿ ಸುಂದರಮ್ ಕಾಂಪ್ಲೆಕ್ಸ್ ನಲ್ಲಿ ಇದೆ. *2023* ನೇ ಇಸವಿಯಲ್ಲಿ ಒಂದು ದಿನ ಪೊಲೀಸರು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಇದ್ದ ಒಬ್ಬ ಹರ್ಷಿತಾ ಎನ್ನುವ ಮಹಿಳೆಯ ಮೃತ ದೇಹದ ಫೋಟೋ ತೆಗೆಯಲು ಕರೆದಿದ್ದರು. ಆ ಕಾಲಕ್ಕೆ ನಾನು ಆ ಮಹಿಳೆಯ ಶವದ ಫೋಟೋ ತೆಗೆದು ಡಿವಿಡಿ ಗೆ ಹಾಕಿ ಪ್ರಿಂಟ್ ಮಾಡಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*8* ಮತ್ತು *9* ಮತ್ತು ಇತರೆ *7* ಫೋಟೋಗಳು ನಾನು ತೆಗೆದ ಫೋಟೋಗಳು ಮತ್ತು ಈಗ ನಾನು ನೋಡುತ್ತಿರುವ ಡಿವಿಡಿ ಆ ಫೋಟೋಗಳನ್ನು ಹಾಕಿದ್ದ ಡಿವಿಡಿ ಇರುತ್ತದೆ. ಸದರಿ ಫೋಟೋಗಳನ್ನು ನಿ.ಪಿ-*20* ರಿಂದ *26* ಮತ್ತು ಡಿವಿಡಿಯನ್ನು ನಿ.ಪಿ-*27* ಎಂದು ಗುರುತಿಸಿದೆ. ಆ ಫೋಟೋಗಳನ್ನು ತೆಗೆದು ಪ್ರಿಂಟ್ ಹಾಕಿದ ಬಗ್ಗೆ ಕಲಂ *65* ಬಿ ಪ್ರಮಾಣಪತ್ರ ಕೊಟಿಟದ್ದೇನೆ. ಈಗ

ನಾನು ನೋಡುತ್ತಿರುವ ಪ್ರಮಾಣಪತ್ರ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರಮಾಣಪತ್ರವನ್ನು ನಿಪಿ-*28* ಮತ್ತು ಸಹಿಯನ್ನು ನಿ.ಪಿ-*28(ಎ)* ಎಂದು ಗುರುತಿಸಿದೆ. *2023* ಕಿಂತ ಎರಡು ವರ್ಷಗಳಿಂದ ನಾನು ಪೊಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಸ್ಟುಡಿಯೋದ ನಿಕೋನ್ ಕ್ಯಾಮಾರದಿಂದ ಪೊಟೋ ತೆಗೆದಿದ್ದೇನೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀಮತಿ ಜ್ಯೋತಿ ರವರಿಂದಃ-</u>

*2.* ನಾನು ಪೊಟೋಗ್ರಫಿ ಬಗ್ಗೆ ಯಾವುದೇ ಕೋರ್ಸ್ ಅನ್ನು ಅಭ್ಯಾಸ ಮಾಡಿಲ್ಲ. ನಮ್ಮ ಸ್ಟುಡಿಯೋದ ಕುರಿತು ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಕ್ಯಾಮಾರ ಯಾವ ವರ್ಷದ್ದು ಎಂದು ನಮೂದಿಸಿಲ್ಲ ಎಂದರೆ ಇರಬಹುದು. ಪೊಟೋ ಪ್ರಿಂಟ್ ಮಾಡಿದ್ದ ಪ್ರಿಂಟರ್ ನ ವಿವರಗಳು ಪ್ರಮಾಣಪತ್ರದಲ್ಲಿ ನಮೂದು ಇಲ್ಲ ಎಂದರೆ ನಿಜ. ಕಂಪ್ಯೂಟರ್ ಯಾವುದು ಎಂದು ಸಹ ನಮೂದು ಮಾಡಿಲ್ಲ ಎಂದರೆ ನಿಜ. ಪೊಟೋ ತೆಗೆಯಲು ಬರುವಂತೆ ನನಗೆ ಲಿಖಿತ ನೋಟಿಸ್ ಕೊಟ್ಟಿರಲಿಲ್ಲ ಪೊನ್ ಮಾಡಿ ಕರೆಸಿದ್ದರು. ಪೊಟೋ ಮತ್ತು ಡಿವಿಡಿಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ ದಿನಾಂಕ ನೆನಪಿಲ್ಲ. ಪೊಟೋ ತೆಗೆದಿದ್ದಕ್ಕೆ ನನಗೆ ಹಣ ಕೊಟ್ಟಿದ್ದ ಬಗ್ಗೆ ರಶೀದಿ ಕೊಟ್ಟಿಲ್ಲ. ನನಗೆ ಪೊಟೋ ತೆಗೆಯಲು ಪರಿಣತಿ ಇಲ್ಲ ಮತ್ತು ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು